<u>ಅಸಲು ದಾವಾ ಸಂಖ್ಯೆ- **115/2023**</u> ಡಿ.ಡಬ್ಲ್ಯೂ:- **1**

ದಿನಾಂಕಃ **19-12-2025** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲು:- **9** ನೇ ಪ್ರತಿವಾದಿ ಪರ ವಕೀಲರಿಂದ:-</u>

ವಾದಿಯ ಮನೆಯ ಹೆಣ್ಣು ಮಕ್ಕಳಿಗೂ ಮತ್ತು ಪ್ರತಿವಾದಿಯ ಮನೆಯ ಹೆಣ್ಣು ಮಕ್ಕಳಿಗೂ ಹೊಂದಾಣಿಕೆಯಾಗದೇ ಇದ್ದ ಕಾರಣ ಪ್ರತ್ಯೇಕವಾಗಿ ವಾಸವಾಗಿದ್ದರು ಎಂದರೆ ಸರಿಯಲ್ಲ. ನಮ್ಮ ತಂದೆಯ ಜೀವಿತಕಾಲದಲ್ಲಿ ಒಟ್ಟು ಕುಟುಂಬದ ಪರವಾಗಿ ದಾವಾ ಐಟಂ.2 ರ ಆಸ್ತಿಗೆ ಸಂಬಂಧಪಟ್ಟಂತೆ ಕಂದಾಯ ಇಲಾಖೆಗೆ ಫಾರಂ ನಂ.53 ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಸದರಿ ಅರ್ಜಿಯನ್ನು ಒಟ್ಟು ಕುಟುಂಬದ ಪರವಾಗಿ ಸಲ್ಲಿಸಿದ್ದರು ಸಹ ಸಲ್ಲಿಸಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಐಟಂ ನಂ.2 ರ ಆಸ್ತಿಯನ್ನು ನಮ್ಮ ತಂದೆಯವರ ಜೀವಿತಾವಧಿಯಲ್ಲಿ ಸರ್ಕಾರದಿಂದ ಮಂಜೂರಾಗಿರುವುದಿಲ್ಲ ಎಂದರೆ ಸರಿ. ನಮ್ಮ ತಂದೆಯವರು ಈಗ್ಗೆ 4 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ದಾವಾ ಐಟಂ ನಂ.2 ರ ಆಸ್ತಿಯು ಸರ್ಕಾರಿಂದ ಈಗ್ಗೆ ಸುಮಾರು 3 ವರ್ಷಗಳ ಹಿಂದೆ ಮಂಜೂರಾಗಿರುತ್ತದೆ. ದಾವಾ ಐಟಂ ನಂ.2 ರ ಆಸ್ತಿಯನ್ನು ಮಂಜೂರು ಮಾಡುವ ಸಮಯದಲ್ಲಿ ನನ್ನ ತಂದೆ ತೀರಿಕೊಂಡಿದ್ದರಿಂದ ನನ್ನ ತಾಯಿಯ ಹೆಸರಿಗೆ ಒಟ್ಟು ಕುಟುಂಬದ ಪರವಾಗಿ ಮಂಜೂರು ಮಾಡಿದ್ದಾರೆ ಎಂದರೆ ಸರಿಯಲ್ಲ. ದಾವಾ ಐಟಂ ನಂ.2 ರ ಆಸ್ತಿಗೆ ಸಂಬಂಧಪಟ್ಟಂತೆ ಮಂಜೂರಾದ ಸಮಯದಲ್ಲಿ ನಮ್ಮ ತಂದೆಯವರು ತೀರಿಕೊಂಡಿದ್ದರಿಂದ ನಾಮಕಾವ್ಯಸ್ಥೆಗೆ ನನ್ನ ತಾಯಿಯ ಹೆಸರಿಗೆ ಮಂಜೂರು ಮಾಡಿದ್ದಾರೆ ಎಂದರೆ ಸರಿಯಲ್ಲ. ವಾದಿಯು ದಾವಾ ಐಟಂ ನಂ.1 ಮತ್ತು 2 ರ ಆಸ್ತಿಯಲ್ಲಿ ಭಾಗಾಂಶ ಕೇಳಲು ಬಂದಾಗ ನಾವು ತಿರಸ್ಕರಿಸಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ವಾದಿಗೆ, ಪ್ರತಿವಾದಿ 6, 8 ಮತ್ತು 9 ರವರಿಗೆ ಸಮಾನವಾದ ಹಕ್ಕು ಮತ್ತು ಹಿತಾಸಕ್ತಿ ಇದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ದಾವಾ ಐಟಂ ನಂ.1 ರಲ್ಲಿ ಭಾಗಾಂಶದ ಹಕ್ಕು ಮತ್ತು ಹಿತಾಸಕ್ತಿ ಇರುತ್ತದೆ ಆದರೆ ದಾವಾ ಐಟಂ ನಂ.2 ರಲ್ಲಿ ಭಾಗಾಂಶದ ಹಕ್ಕು ಮತ್ತು ಹಿತಾಸಕ್ತಿ ಇರುವುದಿಲ್ಲ ಎಂದು ನುಡಿಯುತ್ತಾರೆ. ದಾವಾ ಐಟಂ ನಂ.2 ರ ಆಸ್ತಿಗೆ ಸಂಬಂಧಪಟ್ಟಂತೆ

ಅರ್ಜಿಯನ್ನು ನಮ್ಮ ತಂದೆಯವರು ಸಲ್ಲಿಸುವ ಪೂರ್ವದಲ್ಲಿ ನಮ್ಮ ತಂದೆಯವರು ಸಾಗುವಳಿ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಸದರಿ ಅರ್ಜಿಯನ್ನು ನಮ್ಮ ತಂದೆಯವರು ಸಲ್ಲಿಸುವ ಸಮಯದಲ್ಲಿ ವಾದಿ ಮತ್ತು ಕುಟುಂಬದ ಇತರ ಸದಸ್ಯರು ದಾವಾ ಐಟಂ ನಂ.2 ರ ಆಸ್ತಿಗೆ ಸಂಬಂಧಿಸಿದಂತೆ ಸಮ್ಮತಿಯನ್ನು ಕೊಟ್ಟಿದ್ದರು ಎಂದರೆ ಸರಿಯಲ್ಲ. ದಾವಾ ಐಟಂ ನಂ.2 ರ ಆಸ್ತಿಯನ್ನು ನಮ್ಮ ತಂದೆಯವರು ತೀರಿಕೊಂಡಿದ್ದರಿಂದ ನಮ್ಮ ಕುಟುಂಬದ ಹಿರಿಯ ವ್ಯಕ್ತಿ ನಮ್ಮ ತಾಯಿಯಾಗಿದ್ದರಿಂದ ಅವರ ಹೆಸರಿಗೆ ಮಂಜೂರು ಮಾಡಿದ್ದಾರೆ ಎಂದರೆ ಸರಿಯಲ್ಲ. ಡಿ.ಡಬ್ಲ್ಯೂ.2 ಸಾಕ್ಷಿ ನಮ್ಮ ಊರಿನವರು ಮತ್ತು ನನಗೆ ಪರಿಚಯಸ್ಥರು. ಡಿ.ಡಬ್ಲ್ಯೂ.2 ಸಾಕ್ಷಿಯು ನನ್ನ ಜೊತೆ ವಿಶ್ವಾಸದಲ್ಲಿದ್ದರಿಂದ ನ್ಯಾಯಾಲಯಕ್ಕೆ ಬಂದು ನನ್ನ ಪರವಾಗಿ ಸಾಕ್ಷಿ ಹೇಳುತ್ತಿದ್ದಾರೆ ಎಂದರೆ ಸರಿಯಲ್ಲ. ದಾವಾ ಐಟಂ ನಂ.1 ಮತ್ತು 2 ರ ಆಸ್ತಿಯಲ್ಲಿ ವಾದಿ, ಪ್ರತಿವಾದಿ 6, 8 ಮತ್ತು 9 ರವರಿಗೆ ಸಮಾನವಾದ ಭಾಗಾಂಶದ ಹಕ್ಕು ಮತ್ತು ಹಿತಾಸಕ್ತಿ ಇದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ದಾವಾ ಐಟಂ ನಂ.1 ರಲ್ಲಿ ಮಾತ್ರ ಭಾಗಾಂಶದ ಹಕ್ಕು ಇರುತ್ತದೆ ಆದರೆ ದಾವಾ ಐಟಂ ನಂ.2 ರಲ್ಲಿ ಇರುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ತಮ್ಮ 3 ನೇ ಪ್ರತಿವಾದಿ ವಕೀಲ ವೃತ್ತಿಯನ್ನು ಮಾಡುತ್ತಿದ್ದರು ಈಗ ಪಾರ್ಶ್ವ ಖಾಯಿಲೆಯಿಂದಾಗಿ ಮನೆಯಲ್ಲೇ ಇದ್ದಾರೆ ಎಂದು ನುಡಿಯುತ್ತಾರೆ. 3 ನೇ ಪ್ರತಿವಾದಿಯ ಮಾತುಕೇಳಿಕೊಂಡು ದಾವಾ ಐಟಂ ನಂ.2 ರ ಆಸ್ತಿಯು ನಮ್ಮ ತಾಯಿಯ ಹೆಸರಿನಲ್ಲಿರುವುದನ್ನು ದುರ್ಲಾಭ ಪಡೆದುಕೊಂಡು ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ:- ಇಲ್ಲ

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.